
ಮಾರ್ಕ್ವೆಜ್ ಈ ಸ್ಥಿತಿಯಲ್ಲಿದ್ದಾಗ ರೋಡ್ರಿಗೋಗೆ ಗೆಳತಿಯ ಫೋನ್ ಬಂತು: 'ನಿಮ್ಮಪ್ಪ ಹೇಗಿದ್ದಾನೆ?'

'ಅಪ್ಪ ವರ್ತಮಾನದಲ್ಲಿ ಬದುಕುತ್ತಿದ್ದಾನೆ. ಅವನಿಗೆ ಭೂತಕಾಲದ ಹೊರೆಯಿಲ್ಲ. ಭವಿಷ್ಯದ ಬಗ್ಗೆ ನಿರೀಕ್ಷೆಗಳಿಲ್ಲ. ಆದರೆ, ಕತೆ ಹೇಳುವ ಮೂಲ ದ್ರವ್ಯವಾದ ಹಿಂದಣ ಅನುಭವವಾಗಲೀ, ಆ ಅನುಭವದ ಆಧಾರದಿಂದ ಮುಂದೇನಾಗುತ್ತದೆ ಅಂತ ಹೇಳುವ ಕೆಲಸವಾಗಲೀ ಇನ್ನು ಮುಂದೆಂದೂ ಅವನ ಜೀವನದಲ್ಲಿ ಇರಲ್ಲ' ಎಂದ ರೊಡ್ರಿಗೊ.

ಫೋಟೊಗ್ರಾಫರ್ ರೊಡ್ರಿಗೊ ಸಿನಿಮಾಗಳನ್ನೂ ಮಾಡುತ್ತಿದ್ದ. ನೆನಪು ಕೈ ಕೊಡಲಾರಂಭಿಸಿದ್ದ ಕಾಲದಲ್ಲಿ ಮಾರ್ಕ್ವೆಜ್ ಮಗನ ಸಿನಿಮಾಕ್ಕಾಗಿ ಅವನ ಜೊತೆ ಕೂತು ಚಿತ್ರಕತೆ ಬರೆಯಲು ಹೊರಟಿದ್ದ. ಕತೆಯ ಹಂದರ ಕುತೂಹಲಕರವಾಗಿತ್ತು: ವೃತ್ತಿ ಜೀವನದಲ್ಲಿ ಯಶಸ್ವಿಯಾದ ಮಧ್ಯವಯಸ್ಕ ಮಹಿಳೆಗೆ ತನ್ನ ಗಂಡ ಇನ್ಯಾರದೋ ಪ್ರೇಮದಲ್ಲಿ ಸಿಲುಕಿರಬಹುದು ಎಂಬ ಅನುಮಾನ ಶುರುವಾಗುತ್ತದೆ. ಬರಬರುತ್ತಾ ಅದು ನಿಜವೆಂದೂ ಗೊತ್ತಾಗುತ್ತದೆ. ವಿಚಿತ್ರವೆಂದರೆ ಆ ಹೆಂಗಸು ಕೂಡ ಇವಳ ಥರವೇ ಇದ್ದಾಳೆ. ಇವಳದೇ ರೂಢಿ ರಿವಾಜು, ಇವಳದೇ ಅಭಿರುಚಿ. ಅವಳು ಇರುವ ಮನೆ ಕೂಡ ಇವಳ ಮನೆಯ ಥರವೇ ಇದೆ. 'ಈ ಎರಡೂ ಪಾತ್ರಗಳನ್ನ ಒಬ್ಬಳೇ ನಟಿ ಮಾಡಬೇಕು' ಅನ್ನುತ್ತಿದ್ದ ಮಾರ್ಕ್ವೆಜ್.



ಇದೀಗ ಮಾರ್ಕ್ವೆಜ್ ಮಗನ ಜೊತೆ ಕೂತು ಚಿತ್ರಕತೆ ಬೆಳೆಸಲು ಹೊರಟರೆ ನೆನಪು ಕೈ ಕೊಡುತ್ತಿದೆ. ಏನೋ ಹೇಳಲು ಹೊರಡುತ್ತಾನೆ. ತಕ್ಕ ಪದ ಸಿಗುತ್ತಿಲ್ಲ. ಅವನು ಹೇಳುವುದು ಮಗನಿಗೆ ತಿಳಿಯುತ್ತಿಲ್ಲ. ಖಿನ್ನನಾದ ಮಗ ಆ ಪ್ರಯತ್ನವನ್ನೇ ಕೈ ಬಿಡುತ್ತಾನೆ.

ಹಿಂದೆಲ್ಲ ಅಪ್ಪ ಅಸಾಧಾರಣ ಧ್ಯಾನದಲ್ಲಿ ಬರೆಯುತ್ತಾ ಕೂತಿರುತ್ತಿದ್ದ ಚಿತ್ರಗಳು ಮಗನ ಕಣ್ಣೆದುರು ಮೂಡುತ್ತಾ ಹೋಗುತ್ತವೆ. ಪುಟ್ಟ ಹುಡುಗ ರೊಡ್ರಿಗೊ ಬರೆಯುವುದರಲ್ಲಿ ಮುಳುಗಿದ್ದ ಅಪ್ಪನಿಗೆ ಏನೋ ಹೇಳಲು ಹೋಗುವನು. ಮಾರ್ಕ್ವೆಜ್ 'ಹೂಂಹೂ' ಎನ್ನುತ್ತಾ ಬರವಣಿಗೆಯ ಜೊತೆ ಸೆಣಸುತ್ತಲೇ ಇರುವನು. ಮಗ ಏನೆಂದ ಅನ್ನುವುದು ಅವನ ತಲೆಗೆ ಹೋಗಿದ್ದರೆ ತಾನೇ! 'ಅಬ್ಬ! ಇಷ್ಟು ಫೋಕಸ್ಡ್ ಆಗಿದ್ರೆ ಇವನು ಸಾಧಿಸೋಕಾಗದೇ ಇರೋದು ಏನಾದರೂ ಉಂಟಾ!' ಎಂದು ಮಗ ಅಪ್ಪನ ಈ ಮಹಾಮಗ್ನ ಚಿತ್ರವನ್ನು ವಿಸ್ಮಯದಿಂದ, ಹೆಮ್ಮೆಯಿಂದ ನೆನೆಯುವನು.

ಅಪ್ಪ ಆಯಾ ದಿನದ ಕಂತು ಬರೆದು ಮುಗಿಸಿ ಡೈನಿಂಗ್ ಟೇಬಲ್ಲಿನಲ್ಲಿ ಕೂತು ಅಂದಿನ ಬರವಣಿಗೆಯ ಏಳುಬೀಳನ್ನು ಹೇಳುತ್ತಿದ್ದ ಚಿತ್ರ ನೆನಪಾಗುವುದು. ಒಂದು ಮಧ್ಯಾಹ್ನ, 'ಬೆಸ್ಟ್ ನಾವೆಲ್ ಬರೀತಿದಿನಿ. ಹತ್ತೊಂಬತ್ತನೇ ಶತಮಾನದ ಗ್ರೇಟ್ ರಷ್ಯನ್ ಕಾದಂಬರಿಗಳಾದ ಮೇಲೆ ಬರ್ತಾ ಇರೋ ಬೆಸ್ಟ್ ನಾವೆಲ್' ಅನ್ನುವನು. ಸಂಜೆಯ ಹೊತ್ತಿಗಾಗಲೇ 'ನಾಳೆ ಕೆಲಸದ್ದೇ ಇರೋದು, ಭಾಳಾ ಕಷ್ಟದ ರೈಟಿಂಗ್. ಬರೀತಾ ಬರೀತಾ ಮಧ್ಯೆ ಒಂದೆರಡು ಸೀರಿಯಸ್ ಅಡೆತಡೆ ಬರ್ತಾ ಇವೆ. ಅವನ್ನ ನಿವಾರಿಸೋದು ಪುಸ್ತಕದ ಕ್ರಿಯೇಟಿವ್ ಸಕ್ಸಸ್‌ಗೆ ಭಾಳಾ ಮುಖ್ಯ' ಅನ್ನುತ್ತಾನೆ. ಮಾರನೆಯ ಬೆಳಗ್ಗೆ ನಾಷ್ಟಾ ಮಾಡುತ್ತಾ ಹೇಳುತ್ತಾನೆ: 'ಇವತ್ತೇನಾರೂ ಕೈ ಹತ್ತದಿದ್ರೆ ಕಾದಂಬರಿ ಎಕ್ಕುಟ್ಟೋಗುತ್ತೆ. ಹಂಗೇನಾರೂ ಆದ್ರೆ ಬಿಟ್ಟಾಕ್ತಿನಿ, ಅಷ್ಟೆ!' ಮತ್ತೆ ಮಧ್ಯಾಹ್ನ ಇದೇ ಥರದ ಮಾತಿನ ಸೈಕಲ್ ಶುರುವಾಗುವುದು.

ಮುಂದೊಂದು ದಿನ ರಾತ್ರಿ 'ನೋ ಬಡಿ ರೈಟ್ಸ್ ಟು ದ ಕರ್ನಲ್' ಕಿರುಕಾದಂಬರಿ ಬರೆದು ಮುಗಿಸಿ ಮರ್ಸಿಡಿಸ್ ರೂಮಿಗೆ ಬಂದ ಮಾರ್ಕ್ವೆಜ್, 'ನಾನು ಕರ್ನಲ್‌ನ ಕೊಂದುಬಿಟ್ಟೆ' ಎಂದು ಮುಖ